೮) ಬರಗಾಲ ಪರಿಸ್ಥಿತಿಯಲ್ಲಿ ಬೆಳೆಗಳಿಗೆ ಬಿದ್ದಿರುವ ರೋಗಕ್ಕೆ ಔಷಧಿಯನ್ನು ಸಿಂಪಡಿಸಲು ಔಷಧಿ ರೂಪದಲ್ಲಿ ಸಬ್ಸಿಡಿಯನ್ನು ಕೊಡುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲವಿದ್ದು ಅಲ್ಲಲ್ಲಿ ಅಲ್ಪಸ್ವಲ್ಪ ಭತ್ತ, ಹತ್ತಿ, ರಾಗಿ, ಜೋಳದ ಬೆಳೆ ಇದ್ದು ಎಂದೂ ಕಾಣದ ರೋಗಗಳು ಈ ಬೆಳೆಗೆ ಬಿದ್ದಿದೆ. ಈವರೆಗೆ ಪ್ರತಿವರ್ಷ ಸಬ್ಸಿಡಿ ರೂಪದಲ್ಲಿ ರೈತರಿಗೆ ಬೆಳೆಗೆ ಸಿಂಪಡಿಸಲು ಬೇಕಾದ ಔಷಧಿ ಸರಕಾರ ಕೃಷಿ ಇಲಾಖೆಯ ಮೂಲಕ ಕೊಡುತ್ತಿದ್ದು ಈ ವರ್ಷ ಈವರೆಗೆ ಸಬ್ಸಿಡಿ ರೂಪದಲ್ಲಿ ಔಷಧಿಯನ್ನು ಕೊಟ್ಟಿಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ ಭತ್ತಕ್ಕೆ ಬೆಂಕಿ ರೋಗ ಬಿದ್ದಿದ್ದು ಅದೇ ರೀತಿ ಹತ್ತಿಗೂ ರೋಗ ಬಿದ್ದಿದೆ. ರಾಜ್ಯದಲ್ಲಿ ಸಬ್ಸಿಡಿ ರೂಪದಲ್ಲಿ ಪ್ರತಿ ಜಿಲ್ಲೆಗೆ ಸರ್ಕಾರ ಏನಾದರೂ ಹಣವನ್ನು ಬಿಡುಗಡೆ ಮಾಡಿದೆಯೇ ಇದರ ಬಗ್ಗೆ ವಿವರವನ್ನು ತಿಳಿಯಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಪ್ರತಿವರ್ಷದಂತೆ ಈ ವರ್ಷವೂ ಸಹ ೫೫-೭೦ ಲಕ್ಷ ರೂಪಾಯಿಗಳ ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಡಲಿಕ್ಕೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವರ್ಷ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರವಾಗಿ ಮಾಡುತ್ತಿದ್ದು ಈ ವರ್ಷ ಜಿಲ್ಲಾ ಪರಿಷತ್ತಿನ ಮುಖಾಂತರವಾಗಿ ಮಾಡುತ್ತಿದ್ದೇವೆ. ಶಿಕಾರಿಪುರ ತಾಲ್ಲೂಕಿನಲ್ಲಿ ಭತ್ತಕ್ಕೆ ಬೆಂಕಿ ರೋಗ ವಾಗಿದ್ದು ನಿಜ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ಈಗಾಗಲೇ ನಮ್ಮ ಇಲಾಖೆಗೆ ಆದೇಶ ಕೊಟ್ಟಿದ್ದೇನೆ.

೯) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯನ್ನು ೧೦೦ ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು

ಶ್ರೀ ವಿನಯಕುಮಾರ ಸೊರಕೆ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರೀ ಆಸ್ಪತ್ರೆಯನ್ನು ೬೪ ಹಾಸಿಗೆ ಆಸ್ಪತ್ರೆಯಿಂದ ೧೦೦ ಹಾಸಿಗೆ ಆಸ್ಪತ್ರೆಯಾಗಿ ಪರಿವರ್ತಿಸಬೇಕಾಗಿ ಕಳೆದ ೭೮ರಲ್ಲಿ ಇಲಾಖಾ ಮಟ್ಟದಲ್ಲಿ ಸರಕಾರಕ್ಕೆ ಪ್ರಸ್ತಾವ ಬಂದಿದ್ದು ಯಾವುದೇ ರೀತಿಯ ಕ್ರಮ ಇಷ್ಟರವರೆಗೆ ಕೈಗೊಳ್ಳದೇ ಹೋಗಿದೆ. ಪುತ್ತೂರು, ವಿಟ್ಲ, ಕಡಬ, ಉಪ್ಪಿನಂಗಡಿ, ಸುಳ್ಯ ಈ ಎಲ್ಲಾ ಕಡೆಗಳಿಂದ ರೋಗಿಗಳು ಇಲ್ಲಿ ಬರುತ್ತಿದ್ದು ಪ್ರತಿದಿನ ನೂರರಿಂದ ಮೇಲೆ ಒಳರೋಗಿಗಳ ಸಂಖ್ಯೆ ಇರುವುದು, ಪುತ್ತೂರು ಸಬ್ ಡಿವಿಜನ್ ಕೇಂದ್ರ ಸ್ಥಳವಾಗಿದ್ದು ಈ ಆಸ್ಪತ್ರೆಯನ್ನು ನೂರು ಹಾಸಿಗೆಯ ಆಸ್ಪತ್ರೆಯನ್ನಾಗಿ ಪರಿವರ್ತನೆಗೊಳಿಸುವುದು ಹಾಗೂ ಆಸ್ಪತ್ರೆಗೆ ನಿಯಮದ ಪ್ರಕಾರ ಸಿಗಬೇಕಾದ ಆ್ಯಂಬ್ಯುಲೆನ್ಸ್ ವ್ಯಾನ್, ಕೆಟ್ಟು ಹೋದಂತಹ ಎಕ್ಸ್‌ರೇ ಮಿಷಿನ್ ರಿಪೇರಿಯು ಕಳೆದ ಒಂದೂವರೆ ವರ್ಷದಿಂದ ಹಾಗೇ ಇದ್ದು ಹಾಗೂ ಆಸ್ಪತ್ರೆಗೆ ನೂತನ ಕಟ್ಟಡವೊಂದನ್ನು ನಿರ್ಮಿಸಲು ಸರ್ಕಾರ ಹೆಚ್ಚಿಗೆ ಅದ್ಯತೆಯನ್ನು ಕೊಡಬೇಕಾಗಿ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಈ ರೀತಿ ಇದೆ:

೧. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿನ ಹಾಸಿಗೆಗಳ ಸಂಖ್ಯೆಯನ್ನು ೬೪ ರಿಂದ ೧೦೦ಕ್ಕೆ ಹೆಚ್ಚಿಸಲು ಹಾಗೂ ನಿಯಮಗಳ ಪ್ರಕಾರ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿತ್ತು.

೨. ತಾಲ್ಲೂಕು ಹಾಗೂ ಉಪ ವಿಭಾಗ ಮಟ್ಟದ ಆಸ್ಪತ್ರೆಗಳನ್ನು ಅನುಕ್ರಮವಾಗಿ ೩೦ ಮತ್ತು ೫೦ ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವುದು ಸರ್ಕಾರದ ನೀತಿಯಾಗಿದೆ. ನಿಯಮಗಳ ಪ್ರಕಾರ ೩೦/೫೦ ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೆ ರಿಸಬೇಕಾದ ಇನ್ನೂ ಳಿದ ಆಸ್ಪತ್ರೆಗಳಿದ್ದು ಯೋಜನಾ ಹಣದ ಮಿತಿಯಿಂದ ಅವುಗಳನ್ನು ಆದ್ಯತೆಯ ಮೇರೆಗೆ ಹಂತ ಹಂತವಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ.

೩. ಪುತ್ತೂರಿನ ಸಾರ್ವಜನಿಕ ಆಸ್ಪತ್ರೆಯು ಉಪ ವಿಭಾಗ ಮಟ್ಟದ್ದಾಗಿದ್ದು, ಅಲ್ಲಿ ಈಗಾಗಲೇ ೬೪ ಹಾಸಿಗೆಗಳು ಇರುವುದರಿಂದ ಅದನ್ನು ೧೦೦ ಹಾಸಿಗೆಗಳಿಗೆ ಹೆಚ್ಚಿಸುವುದು ಸದ್ಯಕ್ಕೆ ಸಾಧ್ಯವಾಗಿಲ್ಲ. ನಿಯಮಗಳ ಪ್ರಕಾರ ಆದ್ಯತೆ ಮೇರೆಗೆ ಮೇಲ್ದರ್ಜೆಗೇರಿಸಿ ಸಬೇಕಾದ ಳಿದ ಆಸ್ಪತ್ರೆಗಳನ್ನು ಮೇಲ್ದರ್ಜೆ

ಗೇರಿಸಿದನಂತರ ಪುತ್ತೂರಿನ ಸಾರ್ವಜನಿಕರ ಬೇಡಿಕೆಯನ್ನು ಹಾಗೂ ಅವಶ್ಯಕತೆಯನ್ನು ಗಮನಿಸಿ ಹಾಗೂ ಹಣದ ಲಭ್ಯತೆಯನ್ನು ಪರಿಗಣಿಸಿ ಅಲ್ಲಿನಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ೬೪ ರಿಂದ ೧೦೦ಕ್ಕೆ ಹೆಚ್ಚಿಸುವುದನ್ನೂ, ಆಗ ನೂತನ ಕಟ್ಟಡದ ವಿಚಾರವನ್ನೂ ಪರಿಶೀಲಿಸಲಾಗುವುದು.

೪. ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಬುಲೆನ್ಸ್, ಕ್ಷ-ಕಿರಣ ಯಂತ್ರದ ರಿಪೇರಿ ಇತ್ಯಾದಿ ಅಗತ್ಯ ಸೌಲಭ್ಯಗಳನ್ನು ಸರಿಪಡಿಸಲು ತುರ್ತು ಕ್ರಮ ತೆಗೆದುಕೊಳ್ಳಲಾಗುವುದು.

(೧೦) ಕುಂದಾಪುರ ತಾಲ್ಲೂಕಿನಲ್ಲಿ ಭೂರಹಿತರು ಅಕ್ರಮ ಮಾಡಿದ ಭೂಮಿಯನ್ನು ಸಕ್ರಮ ಮಾಡುವುದು

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೆ, ಉಳಕೊಳ್ಳಲು ಒಂದು ಮನೆ, ಉಳಲು ಒಂದಿಷ್ಟು ಭೂಮಿ, ಇದು ಗ್ರಾಮೀಣ ಪ್ರದೇಶಗಳ ಬಡ ಭೂರಹಿತ ಶತಮಾನಗಳ ಬಯಕೆ. ಈ ಆದಮ್ಯ ಹಂಬಲದ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹತ್ತಾರು ವರ್ಷಗಳಿಂದ ಸಹಸ್ರಾರು ಮಂದಿ ಬಡವರು ಅಲ್ಪಸ್ವಲ್ಪ ಭೂಮಿಗಾದಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಮಂಜೂರಾತಿ ಪಡೆದ ಭಾಗ್ಯವಂತರು ಕೇವಲ ಕೆಲವರು ಮಾತ್ರ. ಆದರೆ ಉಳಿದವರು ಆ ಭೂಮಿಗಳಲ್ಲಿ ಜೋಪಡಿ ಕಟ್ಟಿ, ಕೃಷಿ ಅಭಿವೃದ್ಧಿ ಮಾಡಿ, ಹಕ್ಕಿಗಾಗಿ ಪರಿತಪಿಸುತ್ತಿದ್ದಾರೆ. ಈ ಅಕ್ರಮಣಗಳನ್ನು ಸಕ್ರಮ ಕರಣಗೊಳಿಸಬೇಕೆಂಬ ಜನತೆಯ ಹಾಗೂ ಜನಪ್ರತಿನಿಧಿಗಳ ಒತ್ತಾಯಕ್ಕೆ ಇನ್ನೂ ಮಾನ್ಯತೆ ದೊರೆತಿಲ್ಲ. ಈ ಕುರಿತು ಮಸೂದೆಯನ್ನು ಈ ಸದನದ ಮುಂದೆ ಶೀಘ್ರದಲ್ಲಿ ತರಬೇಕೆಂದು ಒತ್ತಾಯಿಸುತ್ತೇನೆ. ಪತ್ನಧ್ಯೆ ಭೂರಹಿತರು ಅಕ್ರಮಣ ಮಾಡಿದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿ, ಅನೇಕ ವರ್ಷಗಳಿಂದ ಭೂಸ್ವಾಧೀನ ಹೊಂದಿದ್ದ ಬಡವರನ್ನು ಬಲತ್ಕಾರವಾಗಿ ಎಬ್ಬಿಸಲು ಉದ್ಯುಕ್ತವಾದ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಜಡ್ಕಲ್, ಎಳಜಿತ್ ಮೊದಲಾದ ಗ್ರಾಮಗಳಲ್ಲಿವೆಯೆಂಬುದು ತಿಳಿದುಬಂದಿದೆ. ಅಕ್ರಮಣಗಳ ಸಕ್ರಮಕರಣವಾಗಬಹುದೆಂದು ಹೊಸ ಅಕ್ರಮಣಗಳು ಪ್ರಬಲರಿಂದ, ಅವರ ಪ್ರಚೋದನೆಯಿಂದ ಆಗುತ್ತಿವೆ. ಕುಂದಾಪುರ ತಾಲ್ಲೂಕಿನ ಹೆರಂಜಾಲು ಗ್ರಾಮದಲ್ಲಿ ಅರ್ಜಿ ಕೊಟ್ಟ ಅಕ್ರಮಣಕಾರರ ಭೂಮಿಗೆ ಕೆಲವು ಪ್ರಬಲರು ಅತಿಕ್ರಮ ಪ್ರವೇಶ ಮಾಡಿರುವುದು, ದೂರು ಕೊಟ್ಟಾಗ ಆಡಳಿತಯಂತ್ರ ನಿಷ್ಕ್ರಿಯವಾಗಿರುವುದು ಸಹಾ ತಿಳಿದು ಬಂದಿದೆ. ಹೊಸ ಅಕ್ರಮಣ ಎಲ್ಲಾ ಆಗದಂತೆ, ಹಳೆ ಅಕ್ರಮಣಕಾರರಿಗೆ ಅನ್ಯಾಯವಾಗದಂತೆ ರಕ್ಷಣೆ ನೀಡುವಂತೆ, ಹಕ್ಕುನೀಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಈ ವಿಷಯದಲ್ಲಿ ಸರ್ಕಾರ ಶೀಘ್ರದಲ್ಲಿಯೇ ಒಂದು ನಿರ್ಣಯವನ್ನು ತೆಗೆದುಕೊಂಡು ಅದನ್ನು ತಕ್ಷಣ ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

ಶ್ರೀ ಜಿ. ರಾಮಕೃಷ್ಣ (ಸದಸ್ಯರು ಗೈರುಹಾಜರು).—

(೧೧) ಕಬಿನಿ ಬಲದಂಡೆ ನಾಲೆಯ ಕೆಲಸ ಸ್ಥಗಿತವಾಗಿರುವುದು

ಶ್ರೀ ಜಿ. ರಾಜುಗೌಡ.—ಕಬಿನಿ ಬಲದಂಡೆ ನಾಲೆಯ ೧೬೧ ಕಿ. ಮೀ ಇಂದ ೧೯೦ ಕಿ. ಮೀ. ವರೆವಿಗೆ ಮಾಡುತ್ತಿದ್ದ ಕೆಲಸವು ಹೆಚ್ಚು ಕಡಿಮೆ ಸ್ಥಗಿತವಾಗಿದೆ. ಕಳೆದ ನಾಲ್ಕಾರು ತಿಂಗಳಿಂದಲೂ ಈ ಕೆಲಸವು ಆಮೆ ವೇಗದಲ್ಲಿ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ಸರ್ಕಾರ ಆರ್ಥಿಕ ಬಿಕ್ಕಟ್ಟಿನಿಂದ ನರಳುತ್ತಿರುವುದು ಸಣ್ಣಪುಟ್ಟ ಗುತ್ತಿಗೆದಾರರು ಸಾಲ ಮಾಡಿ, ಆ ಸಾಲವನ್ನು ಸಕಾಲದಲ್ಲಿ ತೀರಿಸಲಾರದೆ ತಲೆ ಮರೆಸಿಕೊಂಡಿದ್ದಾರೆ. ಬಾಕಿ ಉಳಿದಿರುವ ಕೆಲಸ ೧೫೯ ಕಿ.ಮಿ. ರಿಂದ ೧೯೦ ಕಿ. ಮೀ. ವರೆವಿಗೆ ಸುಮಾರು ಎರಡು ಕೋಟಿ ರೂಪಾಯಿಗಳು ಬೇಕಾಗುತ್ತದೆ. ೧೬೦ ಕಿ.ಮೀ. ರಿಂದ ೧೯೦ ವರೆವಿಗೂ ಸುಮಾರು ಮೂರು ಕೋಟಿ ರೂಪಾಯಿ ಬೇಕಾಗುತ್ತದೆ ಸುಮಾರು ೫ ಕೋಟಿ ರೂಪಾಯಿ ಖರ್ಚು ಮಾಡುವುದರಿಂದ ೧೫೯ಕಿ. ಮೀ. ೧೯೦ಕಿ.ಮೀ. ಕಾಲುವೆಯಾಗಿ ಇದರಿಂದ ಸುಮಾರು ೩೦,೦೦೦ ಪ್ರದೇಶಕ್ಕೆ ನೀರಾಗಿ, ಆ ಭಾಗದಲ್ಲಿ ಹೆಚ್ಚಿನ ಭಾಗ ಅಭಾವಕ್ಕೆ ಒಳಗಾಗುವುದಿಲ್ಲವೆಂದೂ ಈ ಬಗ್ಗೆ ಸರ್ಕಾರ ಕೂಡಲೇ ಗಮನಹರಿಸಿ ಮುಂದಿನ ಮುಂಗಾರು ಬೆಳೆಗೆ ನೀರುಕೊಡಬೇಕೆಂದು ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಮಂತ್ರಿಗಳ ಪರವಾಗಿ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಈಗ ಸಂಪನ್ಮೂಲಗಳ ಕೊರತೆ ಇರುವುದರಿಂದ ಸಂಪನ್ಮೂಲಗಳು ದೊರೆತ ತಕ್ಷಣ ಈ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.